# ಉಪ ತಹಶೀಲ್ದಾರರ ನ್ಯಾಯಾಲಯ, ತಂಬ್ರಹಳ್ಳಿ-583224

**OFFICE OF THE DEPUTY TAHASILDAR, THAMBRAHALLI-583224**

ಎ.ವಿಲೇ.ನಂ.ಕಂ.ಪಹಣಿ.ವಿವಾದ/40/2015-16 ದಿನಾಂಕ:07.04.2016

ಉಪತಶೀಲ್ದಾರರು: ಶ್ರೀ ನಾಗರಾಜ. ಹೆಚ್.
ಉಪತಹಶೀಲ್ದಾರರು
ನಾಡ ಕಛೇರಿ ತಂಬ್ರಹಳ್ಳಿ

<u>ವಾದಿ (ಶ್ರೀ/ಶ್ರೀಮತಿ)</u> <u>ಪ್ರತಿವಾದಿ (ಶ್ರೀ/ಶ್ರೀಮತಿ)</u>

ಮೈನಳ್ಳಿ ಅನ್ನಕ್ಕ ಗಂಡ ಮೈನಳ್ಳಿ ಹನುಮರೆಡ್ಡಿ
ಬನ್ನಿಗೋಳ ಗ್ರಾಮ ಹಗರಿಬೊಮ್ಮನಹಳ್ಳಿ ತಾಲೂಕು

ಕಂದಾಯ ನಿರೀಕ್ಷಕರು ತಂಬ್ರಹಳ್ಳಿ

<u>ವ್ಯಾಜ್ಯದ ಜಮೀನಿನ ವಿವರ</u>

| ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|
| ಬಸರಕೋಡ | 58/1 | 4.57 |

*****

<u>ಪೀಠಿಕೆ:</u>

ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ಬಸರಕೋಡ ಗ್ರಾಮದ ಸ.ನಂ. 58/1 ವಿಸ್ತೀರ್ಣ 4.57 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಪಾಲು ವಿಭಾಗ ದಸಾವೇಜು ಪ್ರಕಾರ ಹಕ್ಕುಬದಲಾವಣೆ ಸಂಬಂಧ ಹಕ್ಕು ಬದಲಾವಣೆ ಆದೇಶ ಸಂಖ್ಯೆ:ಹೆಚ್121/2015-16 ರಲ್ಲಿ ಪ್ರಸ್ತುತ ಹಕ್ಕುಬದಲಾವಣೆಗೆ ಅವಕಾಶವಿಲ್ಲವೆಂದು ಪ್ರಕರಣವು ವಿವಾದಸ್ಪದವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಪ್ರಸ್ತುತ ಕಡತವನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕಡತವನ್ನು ಪರಿಶೀಲಿಸಲಾಗಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:25.02.2016ರಂದು ನಿಗಧಿಗೊಳಿಸಿ ಉಭಯ ಪಕ್ಷಗಳಿಗೆ ನೋಟೀಸ್ ಮೂಲಕ ತಿಳಿಸಿ ವಿಚಾರಣೆಯನ್ನು ನಡೆಸಲಾಯಿತು.

ವಾದಿಗಳ ಪ್ರಕಾರ ವ್ಯಾಜ್ಯದ ಜಮೀನು ಮೂಲತಃ ಮೈನಳ್ಳಿ ಹನುಮರೆಡ್ಡಿ ತಂದೆ ಹೇಮರೆಡ್ಡಿ ಇವರ ಹೆಸರಿನಲ್ಲಿದ್ದು ಪ್ರಸ್ತುತ ಜಮೀನು ಪಿತ್ರಾರ್ಜಿತ ಆಸ್ತಿಯಾಗಿದ್ದು ಸದರಿಯವರ ಏಕೈಕ ಪತ್ನಿಯಾದ ಶ್ರೀಮತಿ ಮೈನಳ್ಳಿ ಅನ್ನಕ್ಕ ಗಂಡ ಮೈನಳ್ಳಿ ಹನುಮರೆಡ್ಡಿ ಇವರಿಗೆ ಪಾಲು ವಿಭಾಗದಲ್ಲಿ ಬಿಟ್ಟುಕೊಟ್ಟಿದ್ದು ಸದರಿ ವ್ಯಾಜ್ಯದ ಜಮೀನನ್ನು ವಾದಿಗಳ ಹೆಸರಿಗೆ ಹಕ್ಕು ಬದಲಾವಣೆ ಮಾಡುವಂತೆ ಕೋರಿರುತ್ತಾರೆ.

ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಪ್ರಸ್ತುತ ಜಮೀನಿನ ಪಟ್ಟಾದಾರರು ತನ್ನ ಹೆಂಡತಿಗೆ ಪಾಲುವಿಭಾಗ ಮಾಡಿಕೊಡಲು ಅವಕಾಶವಿರುವುದಿಲ್ಲವೆಂದು ವರದಿ ಮಾಡಿರುತ್ತಾರೆ.

ವಾದಿಗಳು ಮಂಡಿಸಿದ ವಾದ-ಪ್ರತಿವಾದ ಹಾಗೂ ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತವೆ.

1. ವ್ಯಾಜ್ಯದ ಜಮೀನಿನ ಪಹಣಿ ಪತ್ರಿಕೆಯನ್ನು ಪರಿಶೀಲಿಸಲಾಗಿ ಬಸರಕೋಡು ಗ್ರಾಮದ ಸ.ನಂ. 58/1 ವಿಸ್ತೀರ್ಣ 4.57 ಎಕರೆ ಜಮೀನು ಮೈನಳ್ಳಿ ಹನುಮರೆಡ್ಡಿ ತಂದೆ ಹೇಮರೆಡ್ಡಿ ಇವರ ಹೆಸರಿನಲ್ಲಿರುವುದಾಗಿ ಕಂಡುಬಂದಿರುತ್ತದೆ.
2. ವಾದಿಗಳು ಸಲ್ಲಿಸಿದ ಪಾಲು ವಿಭಾಗ ದಸ್ತಾವೇಜು ದಿನಾಂಕ:01.12.2015 ರ ಪ್ರಕಾರ ಪ್ರಸ್ತುತ ವ್ಯಾಜ್ಯದ ಜಮೀನನ್ನು ಸದರಿ ಪಟ್ಟಾದಾರರ ಹೆಂಡತಿಯಾದ ವಾದಿಗಳ ಹೆಸರಿಗೆ ಖಾತೆ ಮಾಡಿಕೊಡುವಂತೆ ಹಾಗೂ ಕುಟುಂಬಸ್ಥರು ಪ್ರಸ್ತುತ ಖಾತೆ ಬದಲಾವಣೆಗೆ ಯಾವುದೇ ಆಕ್ಷೇಪಣೆ ಇಲ್ಲವೆಂದು ಅಫಿಡಿವಿಟ್ ಸಲ್ಲಿಸಿರುತ್ತಾರೆ.
3. ಪ್ರತಿವಾದಿಗಳು ಸಲ್ಲಿಸಿದ ವಂಶವೃಕ್ಷದ ಪ್ರತಿಯನ್ನು ಪರಿಶೀಲಿಸಲಾಗಿ ವ್ಯಾಜ್ಯದ ಜಮೀನಿನ ಪಟ್ಟಾದಾರರಾದ ಮೈನಳ್ಳಿ ಹನುಮರೆಡ್ಡಿ ತಂದೆ ಹೇಮರೆಡ್ಡಿ ಇವರಿಗೆ ಹೆಂಡತಿಯಾದ ಅನ್ನಕ್ಕ ಹಾಗೂ ಮಕ್ಕಳಾದ ಬಸವರೆಡ್ಡಿ ಮತ್ತು ದೇವರೆಡ್ಡಿ ಎಂಬ ಮಕ್ಕಳಿರುವುದು ಕಂಡುಬಂದಿರುತ್ತದೆ.

ಮೇಲ್ಕಂಡ ಅಂಶಗಳನ್ನು ಪರಿಗಣನಗೆ ತೆಗೆದುಕೊಂಡು ವ್ಯಾಜ್ಯದ ಜಮೀನಿನ ಪಟ್ಟಾದಾರರು ದಿನಾಂಕ:01.12.2015 ರಂದು ಕುಟುಂಬಸ್ಥರು ಮಾಡಿಕೊಂಡ ಪಾಲು ವಿಭಾಗ ದಸ್ತಾವೇಜು ಪ್ರಕಾರ ಪಟ್ಟಾದಾರರ ಹೆಂಡತಿಯಾದ ವಾದಿಗಳ ಹೆಸರಿಗೆ ಖಾತೆ ಮಾಡುವುದು ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡಂತೆ ಆದೇಶ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನೆಲೆ ಮತ್ತು ಕಾರಣಗಳ ಆಧಾರದ ಮೇರೆಗೆ ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ಬಸರಕೋಡ ಗ್ರಾಮದ ಸ.ನಂ. 58/1 ವಿಸ್ತೀರ್ಣ 4.57 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ವ್ಯಾಜ್ಯದ ಜಮೀನಿನ ಪಟ್ಟಾದಾರರ ಕುಟುಂಬಸ್ಥರು ಮಾಡಿಕೊಂಡ ಪಾಲು ವಿಭಾಗ ದಸ್ತಾವೇಜು ದಿನಾಂಕ:01.12.2015 ರ ಮೇರೆಗೆ ವಾದಿಗಳಾದ ಮೈನಳ್ಳಿ ಅನ್ನಕ್ಕ ಗಂಡ ಮೈನಳ್ಳಿ ಹನುಮರೆಡ್ಡಿ ಇವರ ಹೆಸರಿಗೆ ಖಾತೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ಈ ದಿನ ದಿನಾಂಕ: 07.04.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

ಉಪ ತಹಶೀಲ್ದಾರರ ಕಛೇರಿ * Office of the Deputy Tahsildar

07/04

[ನಾಗರಾಜ.ಹೆಚ್]
ಉಪ ತಹಶೀಲ್ದಾರರು,
ನಾಡ ಕಛೇರಿ ತಂಬ್ರಹಳ್ಳಿ

1. ವಾದಿ ಮತ್ತು ಪ್ರತಿವಾದಿಗಳಿಗೆ.
2. ಭೂಮಿ ಶಿರಸ್ತೆದಾರರು, ತಾಲೂಕು ಕಛೇರಿ ಹಗರಿ ಬೊಮ್ಮನಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

11/04/16